ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/14/ಸಾವಿ/ಮಲೈಕಿಸ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:22/11/2018

# ಸುತ್ತೋಲೆ

**ವಿಷಯ:** ಲೈಂಗಿಕ ಕಿರುಕುಳ ನಿವಾರಣಾ ಸಮಿತಿಯಲ್ಲಿ ಸ್ವೀಕೃತವಾಗಿರುವ ದೂರುಗಳ ಕುರಿತು ಮಾಸಿಕ ವರದಿ ನೀಡುವ ಬಗ್ಗೆ.

**ಉಲ್ಲೇಖ:**
1. Judgement copy of Supreme Court of India, Vishaka & Ors vs State of Rajasthan & Ors on 13 August 1997.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಅ.ಸ.ಪ.ಸಂ:ಮಮಿ/12/ಪ್ರಕಾಆಶಾ/2017/2027, ದಿನಾಂಕ: 16.12.2017ರ ಪತ್ರ.
3. ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ:14/11/2018.

*****

ಸರ್ಕಾರಿ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ದೃಷ್ಟಿಯಿಂದ ಉಲ್ಲೇಖ (1)ರ ತೀರ್ಪಿನ ದಿನಾಂಕ:13.8.1997ರಂದು ಸರ್ವೋಚ್ಛ ನ್ಯಾಯಾಲಯವು ತೀರ್ಪನ್ನು ನೀಡಿದ್ದು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಉಲ್ಲೇಖ(2)ರಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು Sexual Harassment of Women at workplace (Prevention, Prohibition and Redressal) Act 2013ರ ಅಧಿನಿಯಮಕ್ಕೆ ಸಂಬಂಧಿಸಿದಂತೆ ಪ್ರತಿ ಸರ್ಕಾರಿ ಕಛೇರಿಯಲ್ಲಿ ಆಂತರಿಕ ದೂರು ಸಮಿತಿ ರಚಿಸಲು ಈಗಾಗಲೇ ಉಲ್ಲೇಖ(3)ರಲ್ಲಿ ಸುತ್ತೋಲೆ ಹೊರಡಿಸಲಾಗಿರುತ್ತದೆ. **ತಮ್ಮ ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸಮಿತಿ ರಚನೆ ಮಾಡಿರುವ ಬಗ್ಗೆ ಕಾಲೇಜು/ ಕಛೇರಿವಾರು ವಿವರಗಳನ್ನು ತಕ್ಷಣ ಸಲ್ಲಿಸುವಂತೆ ತಿಳಿಸಲಾಗಿದೆ. ಇದನ್ನು ಅತ್ಯಂತ ತುರ್ತು ಎಂದು ಪರಿಗಣಿಸುವುದು.**

ಸದರಿ ಸುತ್ತೋಲೆಯಲ್ಲಿ ತಿಳಿಸಿರುವ ರೀತ್ಯಾ ರಚಿಸಲಾದ ಸಮಿತಿಯು Sexual Harassment of Women at workplace (Prevention, Prohibition and Redressal) Act 2013ರಲ್ಲಿ ತಿಳಿಸಿರುವ ರೀತ್ಯಾ ಕಾರ್ಯ ನಿರ್ವಹಿಸಬೇಕಾಗಿದ್ದು, ಸ್ವೀಕೃತವಾದ ಪ್ರಕರಣಗಳ ಕುರಿತು ಮಾಸಿಕ

ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕಾದ ಕಾರಣ, ಈ ಕೆಳಕಂಡ ನಮೂನೆಯಲ್ಲಿ ತಮ್ಮ ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ (ಪ್ರಥಮ ದರ್ಜೆ, ಕಾನೂನು, ಚಿತ್ರಕಲಾ ಹಾಗೂ ಶಿಕ್ಷಣ) ಮತ್ತು ಖಾಸಗಿ ಅನುದಾನಿತ (ಪ್ರಥಮ ದರ್ಜೆ, ಕಾನೂನು, ಚಿತ್ರಕಲಾ ಹಾಗೂ ಶಿಕ್ಷಣ) ಕಾಲೇಜುಗಳಿಂದ ಮಾಹಿತಿ ಪಡೆದು Nudi 4.0 ತಂತ್ರಾಂಶದಲ್ಲಿ Microsoft excelನಲ್ಲಿ ಮಾಸಿಕ ವರದಿಯನ್ನು ಪ್ರತಿ ತಿಂಗಳಿನ 03ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಸರ್ಕಾರಿ ಕಾಲೇಜುಗಳು ಮತ್ತು ಖಾಸಗಿ ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು.

**ನಮೂನೆ**

| ಕ್ರ.ಸಂ | ಕಾಲೇಜು/ ಕಛೇರಿ ಹೆಸರು | ಹಿಂದಿನ ಬಾಕಿ ಪ್ರಕರಣಗಳ ಸಂಖ್ಯೆ | ದಾಖಲಾಗಿರುವ ಪ್ರಕರಣಗಳು | ಒಟ್ಟು | ಇತ್ಯರ್ಥವಾದ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು | ಷರಾ |
|---|---|---|---|---|---|---|---|
| | | | | | | | |

ಇದು ನ್ಯಾಯಾಲಯಕ್ಕೆ ಸಂಬಂಧಿಸಿದ ಪ್ರಕರಣವಾಗಿರುವುದರಿಂದ ಯಾವುದೇ ವಿಳಂಬಕ್ಕೆ ಅವಕಾಶ ನೀಡದೇ, ನಿಗದಿತ ದಿನಾಂಕದೊಳಗಾಗಿ ಮಾಹಿತಿಯ ಸಾಫ್ಟ್ ಕಾಪಿಯನ್ನು ಇಮೇಲ್ ವಿಳಾಸ womenwelfare.cce@gmail.com ಹಾಗೂ ಹಾರ್ಡ್ ಕಾಪಿಯನ್ನು ಪ್ರತಿ ತಿಂಗಳು ಈ ಕಛೇರಿಗೆ ಕಳುಹಿಸಲು ಸೂಚಿಸಲಾಗಿದೆ. ಇಲ್ಲವಾದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

**(ಮಾನ್ಯ ಆಯುಕ್ತರ ಟಿಪ್ಪಣಿ ಆದೇಶದನ್ವಯ)**

**ತಮ್ಮ ವಿಶ್ವಾಸಿ**

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಪ್ರಾಂಶುಪಾಲರು, ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ/ ಚಿತ್ರಕಲಾ/ ಶಿಕ್ಷಣ ಹಾಗೂ ಕಾನೂನು ಕಾಲೇಜುಗಳಿಗೆ – ಮಾಹಿತಿಗಾಗಿ ಹಾಗೂ ಸುತ್ತೋಲೆಯಲ್ಲಿನ ಸೂಚನೆಯಂತೆ ಪ್ರತಿ ತಿಂಗಳ 01 ನೇ ತಾರೀಖು ಮಾಹಿತಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರಿಗೆ ನೇರವಾಗಿ ಸಲ್ಲಿಸಲು ಸೂಚಿಸಿದೆ. (ಕೇಂದ್ರ ಕಛೇರಿಗೆ ಮಾಹಿತಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ)
3. ವಿಶೇಷಾಧಿಕಾರಿಗಳು, ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು– ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4. ಕಛೇರಿ ಪ್ರತಿ.
5. ಹೆಚ್ಚುವರಿ ಪ್ರತಿ.

*D:\HARINI\File No-278.dox*